ದಿ.01.10.2021ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣಬೋದಿಸಲಾಯ್ತು.

**ಪಾಟೀ ಸವಾಲುಃ 1, 3ರಿಂದ 6ಆರೋಪಿಯ ಪರ ವಕೀಲರಾದ ಶ್ರೀ ಎಸ್‌ಬಿರವರಿಂದಃ**

ದೂರು ನೀಡಿದಾಗ 5-6 ಜನ ಎಂದು ಬರೆದಿದ್ದು 5-6 ಜನ ಯಾರು ಎಂದು ಡಿವೈಎಸ್‌ಪಿರವರು ನನ್ನನ್ನು ವಿಚಾರಿಸಿದ್ದರು. ಠಾಣೆಯಲ್ಲಿ ವಿಚಾರಿಸಿದ್ದರು ಸಮಯ ಗೊತ್ತಿಲ್ಲ. 5-6 ಜನರ ಬಗ್ಗೆ ಸುಮಾರು 15 ನಿಮಿಷದಿಂದ ಅರ್ಧ ಘಂಟೆ ವಿಚಾರಿಸಿದ್ದರು. 5-6 ಜನರ ವಯಸ್ಸಿನ ಕುರಿತು ಕೇಳಿರಲಿಲ್ಲ ನಾನು ಹೇಳಿರಲಿಲ್ಲ. 5-6 ಜನರ ಬಣ್ಣ, ವಯಸ್ಸು, ಎತ್ತರ, ಚಹರೆ ಬಗ್ಗೆ ಕೇಳಿದ್ದರು 5-6 ಜನರ ಚಹರೆ ನಾನು ನೋಡಿದ್ದೆ ನಾನು ಅವರ ಬಣ್ಣ ಗಮನಿಸಿರಲಿಲ್ಲ. 5-6 ಜನರ ಬಣ್ಣ, ವಯಸ್ಸು, ಎತ್ತರ, ಚಹರೆ ಬಗ್ಗೆ ನನಗೆ ಗೊತ್ತಿರಲಿಲ್ಲವಾದ್ದರಿಂದ ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಹೌದು 5-6 ಜನರು ಗೊತ್ತು ಎಂದು ಹೇಳಿದ್ದೆ. 5-6 ಜನರ ಹೆಸರು ಗೊತ್ತಿರಲಿಲ್ಲ ಆದ್ದರಿಂದ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ ಆದರೆ ಅವರೇ 5-6 ಜನರು ಎಂದು ಗೊತ್ತಿತ್ತು, 5-6 ಜನರ ಹೆಸರು ಪೋಲಿಸರು ಹೇಳಿದ ನಂತರ ಗೊತ್ತಾಯಿತು ಸಾಕ್ಷಿ ಮುಂದುವರಿದು ನ್ಯಾಯಾಲಯದಲ್ಲಿ 5-6 ಜನರ ಹೆಸರು ಕೂಗುವಾಗ ಗೊತ್ತಾಯಿತು.

ಪೋಲಿಸರು ಯಾರ ಕೈಯಲ್ಲಿ ಯಾವ ಆಯುಧಗಳು ಇದ್ದವು ಎಂದು ವಿಚಾರಿಸಿದ್ದರು. ಆಯುಧಗಳ ಬಣ್ಣ ಉದ್ದ ಅಗಲ ಪೋಲಿಸರು ವಿಚಾರಿಸಿದ್ದರಾ ಎಂದರೆ ಆಯುಧಗಳ ಹೆಸರು ಹೇಳಿದ್ದೇನೆ ಬಣ್ಣ ಇರುವುದಿಲ್ಲ. ದೂರಿನಲ್ಲಿ ಆಯುಧಗಳ ಬಣ್ಣ ಉದ್ದ ಅಗಲ ಬರೆದಿರುವುದಿಲ್ಲ ಎಂದರೆ ಸರಿ. ಯಾರ್‍ಯಾರ ಕೈಯಲ್ಲಿ ಯಾವ್ಯಾವ ಆಯುಧಗಳು ಇತ್ತು ಎಂದು ಸ್ಪಷ್ಟವಾಗಿ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ. ಯಾರ್‍ಯಾರ ಕೈಯಲ್ಲಿ ಯಾವ್ಯಾವ ಆಯುಧಗಳು ಇತ್ತು ಎಂದು ಪೋಲಿಸರು ವಿಚಾರಿಸಿದ್ದರು.

ಯಾರ್‍ಯಾರ ಕೈಯಲ್ಲಿ ಯಾವ್ಯಾವ ಆಯುಧಗಳು ಇತ್ತು ಎಂದು ನನಗೆ ಗೊತ್ತಿಲ್ಲ ಆ ಕಾರಣದಿಂದ ಅದನ್ನು ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಯಾರ್‍ಯಾರ ಕೈಯಲ್ಲಿ ಯಾವ್ಯಾವ ಆಯುಧಗಳು ಇತ್ತು ಎಂದು ನನಗೆ ಗೊತ್ತು ಅದರೆ ದೂರಿನಲ್ಲಿ ಬರೆದಿದೆಯೋ ಇಲ್ಲವೋ ನೆನಪಿಲ್ಲ ಗೊತ್ತಿರದೇ ಇರುವುದರಿಂದ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ದೂರು ನೀಡಿದ ನಂತರ ಸುಮಾರು ಒಂದು ಘಂಟೆಯವರೆಗೆ ಠಾಣೆಯಲ್ಲಿದ್ದೆ. ಪೋಲಿಸರು ಮರುದಿನ ಎಫ್ಐಆರ್ ಪ್ರತಿ ಕೊಟ್ಟಿದ್ದರು ಆದರೆ ಸಮಯ ನೆನಪಿಲ್ಲ. ಎಫ್ಐಆರ್ ಅನ್ನು ಠಾಣೆಯಲ್ಲಿ ನೀಡಿದ್ದರು. ಠಾಣೆಗೆ ಹೋಗಿದ್ದೆ ಎಷ್ಟು ಘಂಟೆಗೆ ಹೋಗಿದ್ದೆನೋ ನೆನಪಿಲ್ಲ. ಠಾಣೆಗೆ ನಾನೇ ಹೋಗಿದ್ದೆ ಪೋಲಿಸರು ಕರೆದಿರಲಿಲ್ಲ. ಮರುದಿನ ಮತ್ತೊಂದು ದೂರಿನ ಬಗ್ಗೆ ಠಾಣೆಗೆ ಹೋಗಿದ್ದೆ. ಮರುದಿನ ನಾನು ಠಾಣೆಗೆ ಹೋದಾಗ ನನ್ನೊಂದಿಗೆ ಆಂಟೋನಿ ಮತ್ತು ಗುರುಸ್ವಾಮಿ (ಚಾಸಾ-14 ಮತ್ತು ಚಾಸಾ-13) ಇದ್ದರು. ಚಾಸಾ-13ರವರನ್ನು ಠಾಣೆಯಲ್ಲಿ ನೋಡಿದ್ದೆನು. ದೂರಿನಲ್ಲಿ ಚಾಸಾ-13 ಮತ್ತು ಚಾಸಾ-14ರವರ ಹೆಸರನ್ನು ಬರೆದಿರುವುದಿಲ್ಲ ಎಂದರೆ ದೂರು ನೋಡಿ ದೂರಿನಲ್ಲಿ ಬರೆದಿದ್ದೇನೆ ಸ್ಪೆಲ್ಲಿಂಗ್ ಮಿಸ್ಟೇಕ್ ಇದೆ ನನಗೆ ಬರೆಯಲು ಅಷ್ಟಾಗಿ ಬರೆಯಲು ಬಂದಿರುವುದಿಲ್ಲ ಎಂದು ಹೇಳಿದ್ದಾರೆ. ಚಾಸಾ-13 ಮತ್ತು 14ರವರ ಹೆಸರು ನನಗೆ ಗೊತ್ತಿರಲಿಲ್ಲ ಆದ್ದರಿಂದ ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಹೆಸರು ಗೊತ್ತಿತ್ತು ಅದರೆ ಬರೆದಿರುವುದಿಲ್ಲ.

ಚಾಸಾ-13 ಮತ್ತು 14ರವರ ಕುರಿತಂತೆಯೂ ಪೋಲಿಸರು ವಿಚಾರಿಸಿದ್ದರು ಎಷ್ಟು ಸಮಯ ನೆನಪಿಲ್ಲ. ಗಾಯಗಳು ನನ್ನ ಕೈಗೆ ಆಗಿದ್ದವು ಸಾಕ್ಷಿಗೆ ಕೈಯನ್ನು ತೋರಿಸಿ ಎಂದು ಕೇಳಲಾಗಿ ಸಾಕ್ಷಿ ಕೈಯನ್ನು ತೋರಿಸಿ ಘಟನೆ ಹತ್ತು ವರ್ಷದ ಹಿಂದೆ

ಆಗಿದ್ದರಿಂದ ಗಾಯದ ಗುರುತು ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಕೈಗೆ ಆದ ಗಾಯ ಯಾವ ಆಯುಧದಿಂದ ಯಾರು ಮಾಡಿದ್ದರು ಎಂದು ವಿಚಾರಿಸಿದ್ದರು. ಅದನ್ನು ದೂರಿನಲ್ಲಿ ಬರೆದಿದ್ದೇನೆ ಸಾಕ್ಷಿಗೆ ದೂರು ತೋರಿಸಿ ಅದರಲ್ಲಿ ಅದರ ಬಗ್ಗೆ ಬರೆದಿರುವುದಿಲ್ಲ ಎಂದು ಕೇಳಿದರೆ ಸಾಕ್ಷಿ ನನಗೆ ಓದಲು ಸ್ಪಷ್ಟವಾಗಿ ಬರುವುದಿಲ್ಲ ಎಂದು ಹೇಳಿದ್ದಾರೆ. ನನಗೆ ಬಲಗೈಗೆ ಏಟಾಗಿದೆ ಎಂದು ಬರೆದಿರುವುದಿಲ್ಲ ಎಂದರೆ ಕೈಗೆ ಏಟಾಗಿದೆ ಎಂದು ಬರೆದಿದ್ದೇನೆ. ನನ್ನ ಕೈಗೆ ಏಟಾಗಿದೆ ಎಂದೂ ಸಹ ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಯಾವ ಕೈಗೆ ಏಟಾಗಿದೆ ಎಂದು ವಿಚಾರಿಸಿದ್ದರು. ಬಲಗೈಗೆ ಹಲ್ಲೆಯಿಂದ ಯಾವುದೇ ಗಾಯ ಆಗಿರುವುದಿಲ್ಲ ಬೇರೆ ಗಾಯ ತೋರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಾಗರಾಜ ಲಾಂಗ್ ತೆಗೆದುಕೊಂಡು ನನ್ನ ಎಡಗೈನ ಮಧ್ಯದ ಬೆರಳಿಗೆ ಹೊಡೆದನು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ ಎಂದರೆ ಸರಿ ಈಗ ನ್ಯಾಯಾಲಯಕ್ಕೆ ಬಲಗೈ ತೋರಿಸುತ್ತಿದ್ದೇನೆ ಎಂದರೆ ನನಗೆ ಎರಡು ಕೈಗಳಿಗೆ ಏಟಾಗಿತ್ತು.

ಲಾಂಗ್‌ನ ಸಾಮಾನ್ಯ ಉದ್ದ ಅಗಲ ಗೊತ್ತಿಲ್ಲ. 5ನೇ ಆರೋಪಿ ಲಾಂಗ್‌ನಿಂದ ಕೈಬೆರಳಿಗೆ ಹೊಡೆದಿದ್ದಾನೆ ಎಂದು ದೂರಿನಲ್ಲಿ ಬರೆದಿರುವುದಿಲ್ಲ ಆದರೆ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ವೇಳೆ ಹೇಳಿದ್ದೇನೆ. ಆರೋಪಿ ರಂಜಿತ್ ನನ್ನ ಅಣ್ಣನ ಬೆನ್ನಿಗೆ ಚಾಕುವಿನಿಂದ ಚುಚ್ಚಿದನು ಎಂದು ದೂರಿನಲ್ಲಿ ಬರೆದಿರುವುದಿಲ್ಲ ಆದರೆ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ವೇಳೆ ಹೇಳಿದ್ದೇನೆ. ಆದರೆ ಹಲ್ಲೆ ಮಾಡಿದವರ ಹೆಸರುಗಳನ್ನು ದೂರಿನಲ್ಲಿ ಬರೆದಿದ್ದೇನೆ. ಈ ಅಂಶಗಳನ್ನು ಉದ್ದೇಶಪೂರ್ವಕವಾಗಿ ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮರೆತಿರುವುದರಿಂದ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಆರೋಪಿ ರಂಜಿತ್ ನನ್ನ ಅಣ್ಣನ

ಬೆನ್ನಿಗೆ ಚಾಕುವಿನಿಂದ ಚುಚ್ಚಿದನು ಎಂದು ಬರೆದಿರುವುದಿಲ್ಲ ಆದರೆ ಹೆಸರು ಬರೆದಿದ್ದೇನೆ. ನನ್ನ ಅಣ್ಣ ಇನ್ನು ಸತ್ತಿಲ್ಲವೆಂದು ರಂಜಿತ್ ಹತ್ತಿರ ಇದ್ದ ಚಾಕುವನ್ನು ಆರೋಪಿ ಸಂದೀಪ್ ತೆಗೆದುಕೊಂಡು ನನ್ನ ಅಣ್ಣನ ಎದೆಗೆ ಎರಡು ಮೂರು ಬಾರಿ ಚುಚ್ಚಿದನು ಎಂದು ದೂರಿನಲ್ಲಿ ಬರೆದಿರುವುದಿಲ್ಲ ಆದರೆ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ವೇಳೆ ಹೇಳಿದ್ದೇನೆ. ನಾನು ಕಿರುಚಿಕೊಂಡಾಗ ಅಲ್ಲಿಯೇ ಇದ್ದ ಅಂಥೋನಿ ಮತ್ತು ಗುರುಸ್ವಾಮಿ ಸ್ಥಳಕ್ಕೆ ಬಂದರು, ಅವರುಗಳನ್ನು ನೋಡಿ ಆರೋಪಿಗಳು ಅಲ್ಲಿಂದ ಓಡಿ ಹೋದರು ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಕಿರುಚಿಕೊಂಡಾಗ ಅಲ್ಲಿಯೇ ಇದ್ದ ಅಂಥೋನಿ ಮತ್ತು ಗುರುಸ್ವಾಮಿ ಸ್ಥಳಕ್ಕೆ ಬಂದರು, ಅವರುಗಳನ್ನು ನೋಡಿ ಆರೋಪಿಗಳು ಅಲ್ಲಿಂದ ಓಡಿ ಹೋದರು ಎಂದು ದೂರಿನಲ್ಲಿ ಬರೆದಿರುವುದಿಲ್ಲ ಆದರೆ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ವೇಳೆ ಹೇಳಿದ್ದೇನೆ.

ದೂರನ್ನು ಪೋಲಿಸರು ಯಾವಾಗ ಕೊಟ್ಟಿದ್ದರು ಎಂದರೆ ಅದೇದಿನ ಸಂಜೆ ಕೊಟ್ಟಿರಬಹುದು ನೆನಪಿಲ್ಲ. ದೂರನ್ನು ನಾನು ಓದಿ ತಿಳಿದುಕೊಂಡಿದ್ದೆ ಬರೆದು ಸರಿಯಾಗಿದೆ ಎಂದು ತಿಳಿದುಕೊಂಡೆನು. ಮರುದಿನ ಠಾಣೆಗೆ ಹೋದ ನಂತರ ಯಾವಾಗ ಠಾಣೆಗೆ ಪುನಃ ಯಾವಾಗ ಹೋಗಿದ್ದೆನೋ ನನಗೆ ನೆನಪಿಲ್ಲ.

ಸಾಕ್ಷಿ ಮು.ಮಾ-6 ಮತ್ತು 7ನ್ನು ನೋಡಿ ಅದನ್ನು ಪೋಲಿಸರು ತೋರಿಸಿದ್ದರಾ ಎಂದರೆ ತೋರಿಸಿದ್ದರು ಯಾವಾಗ ತೋರಿಸಿದ್ದರೋ ನೆನಪಿಲ್ಲ. ಆರೋಪಿತರು ಸಿಕ್ಕ ನಂತರ ಮು.ಮಾ-6 ಮತ್ತು 7ನ್ನು ಠಾಣೆಯಲ್ಲಿ ನೋಡಿದ್ದೇನೆ. ಅವುಗಳ ಕುರಿತಂತೆ ಪೋಲಿಸರು ನನ್ನನ್ನು ವಿಚಾರಿಸಿದ್ದರು ಆದರೆ ಯಾವ ದಿನ ವಿಚಾರಿಸಿದ್ದರು ನೆನಪಿಲ್ಲ. ನನಗೆ ಕತ್ತಿ ಚೂರಿ ಡ್ರಾಗರ್ ಚಾಕು ಮಚ್ಚು ಎಂದರೆ ಏನು ಎನ್ನುವುದು ಮಚ್ಚು ಗೊತ್ತು, ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ-6ನ್ನು ತೋರಿಸಿ ಅದು

ಮಚ್ಚು ಎಂದರೆ ಸಾಕ್ಷಿ ಮಚ್ಚು ಅಲ್ಲ ಲಾಂಗ್ ಎಂದು ಹೇಳುತ್ತಾರೆ. ಮಚ್ಚು ಲಾಂಗ್ ಎರಡು ಒಂದೇ ಸರಿಯಲ್ಲ. ಮು.ಮಾ-7 ಚೂರಿ ಎಂದರೆ ಚಾಕು ಎಂದು ಸಾಕ್ಷಿ ಹೇಳುತ್ತಾರೆ. ಮು.ಮಾ-7ರಲ್ಲಿ ಚುಚ್ಚಿರುತ್ತಾರೆ. ಮು.ಮಾ-7ರ ಶೇಪ್ ಬಗ್ಗೆ ಹೇಳಿರುವುದಿಲ್ಲ ಆದರೆ ಚಾಕು ಎಂದು ಹೇಳಿದ್ದೇನೆ. ಘಟನೆಯನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ನೋಡಿದ್ದೇನೆ.

**ಪಾಟೀ ಸವಾಲುಃ 7 ಮತ್ತು 9ನೇ ಆರೋಪಿತರ ಪರ ಶ್ರೀ ಬಿಸಿಆರ್ ವಕೀಲರಿಂದಃ**

ಈ ಹಂತದಲ್ಲಿ ನ್ಯಾಯಾಲಯದ ಅವಧಿ 05.30 ಆಗಿದ್ದರಿಂದ ಕಾಲಾವಕಾಶದ ಅಭಾವದಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.